Reg No B G 155 8—4—72

55 th Year of Publication ★ 'Satyavadi' Daily, Mysore 4

In the Sta e - The First
Golden Jubilee
Celebrated Paper
★
News, Views, Dharmic
Moral Ethical Matters

ರಾಜ್ಯದಲ್ಲಿ ಪ್ರಥಮ
ಸ್ವರ್ಣ
ಮಹೋತ್ಸವ
ಪೂರೈಸಿದ
ಪತ್ರಿಕೆ

ಸ್ಥಾಪಕರು ಆರಮನೆ ಪಿರಸ್ತೇದಾರ್ ಎಂ.ವಿ. ಸುಬ್ಬರ್ಹಾನ್ ಸಂಪಾದಕರು: ಧರ್ಮಪ್ರಚಾರವಿರತ ಎಂ ಎಸ್. ಕೃಷ್ಣರಾವ್ [ಪ್ರ ಸೇ ಸ

ಪತ್ರಿಕೇನಾನದ ಆರೋಪಣೆ - ಭಾರತದ ನಿರಾಕರಣೆ

ಪ್ರಾಮಾಣಿಕತೆ

ಕಲ್ಕತ್ತಾದಲ್ಲಿ ಕಳೆದ ತಿಂಗಳು ನಡೆದ ವಿಷಯವಿದು ಹೊಸದಾಗಿ ಮದುವೆಯಾದ ದಂಪತಿಗಳು ಒಂದು ಟ್ಯಾಕ್ಸಿಯನ್ನು ಬಾಡಿಗೆಗೆ ಗೊತ್ತು ಮಾಡಿಕೊಂಡು, ತಮಗೆ ಬೇಕಾದ ಕಡೆಗಳಲ್ಲೆಲ್ಲಾ ಸುತ್ತಿ ಮನೆಗೆ ಬಂದರು. ಸುಮಾರು ರೂ. ೫ ಸಾವಿರ ಬೆಲೆ ಬಾಳುವ ಒಡವೆಗಳು, ಒಡವೆವಸ್ತುಗಳು ಇದ್ದ ತಮ್ಮ ಸೂಟ್‌ಕೇಸ್ಸನ್ನು ಟ್ಯಾಕ್ಸಿಯಲ್ಲೇ ಮರೆತುಬಿಟ್ಟರು ಆದರೆ ಕೆಲವು ಗಂಟೆಗಳನಂತರ. ಆ ಟ್ಯಾಕ್ಸಿ ಡ್ರೈವರು ಶ್ರೀ ಶಂಕರ ಚಾಂದ್ರ ಡೇ ಎಂಬಾತನು ಅವರ ಮನೆಗೆ ಬಂದು. ತುಂಬಿದ್ದ ಪದಾರ್ಥಗಳೊಡನೆ ಅವರಿಗೆ ತಲುಪಿಸಿದನು. ಸುತ್ಯಾರ್ಹ ಪ್ರಾಮಾಣಿಕತೆ!

★

ಸಂಸ್ಮರಣೆ

ಈಚೆಗೆ ಹುಗ್ಲಿ ಜಿಲ್ಲಾ ಪುಸ್ತಕಭಂಡಾರದಲ್ಲಿ 3 ದಿವಸಗಳು ನಡೆದ 20 ನೇ ವಾರ್ಷಿಕ ಸಮ್ಮೇಳನದಲ್ಲಿ– ಭಾರತದ ಹೆಚ್ಚು ಕಡಮೆ ಎಲ್ಲಾ ಭಾಷೆಗಳ ಮಾತೃವಾಗಿರುವ ಸಂಸ್ಕೃತವನ್ನು ಭಾರತದ ರಾಜ್ಯಭಾಷೆಯಾಗಿ ಮಾಡಬೇಕೆಂಬ ನಿರ್ಣಯವು ಸರ್ವಾನುಮತದಿಂದ ಮಂಜೂರಾಯಿತು.

ಒಲಂಪಿಯಾ ಚಿತ್ರಮಂದಿರ ಮೈಸೂರು
ದಿನ2-45, 6-15 ಮತ್ತು 9-45ಕ್ಕೆ
ಮತ್ತು ಶಾಲಿಮಾರ್ ಚಿತ್ರಮಂದಿರ ಮೈಸೂರು
ದಿನ 3, 6-30 ಮತ್ತು 10 ಕ್ಕೆ
(ರಾಜ್ಯದ ಪ್ರಪ್ರಥಮ ಸಂಪೂರ್ಣ ಹವಾ ನಿಯಂತ್ರಣ ಯುಸಿ ಚಿತ್ರಮಂದಿರ
ಹೊಟೇಲ್ ಸುಜಾತಾ ಹತ್ತಿರ)
ತಾ 7-4-72 ನೇ ಶುಕ್ರವಾರದಿಂದ ಅಮೋಘ ಪ್ರಾರಂಭ
ದಿನ 3 ಪ್ರದರ್ಶನಗಳು
ಫಿಲ್ಮ್ ನಗರ್‌ನವರ ವರ್ಷದ ಅತ್ಯುತ್ತಮ ಸಂಗೀತಭರಿತ, ಸಾಮಾಜಿಕ
ಚಿತ್ರರತ್ನ
ಸೀಮಾ
ಪಾತ್ರ : ಶಿವಾಜಿ, ರಾಕೇಶ್ ರೋಷನ್, ಕಬೀರ್ ಬೇಡಿ, ಭಾರತಿ,
ಪದ್ಮ ಖನ್ನ ಇನ್ನೂ ಅನೇಕ ಪ್ರಮುಖರು
ಸಂಗೀತ : ಶಂಕರ್ ಜೈಕಿಶನ್
ನಿರ್ದೇಶಕ : ಸುರೇಂದ್ರ ಮೋಹನ್

ಎಂ ಎಲ್ ಎ ಗೆ ಜೋಡಿನಹಾರ ಕತ್ತೆ ಮೆರವಣಿಗೆ

ಬೊಂಬಾಯಿ— ಪರಭಾಣಿ ಜಿಲ್ಲೆಯ ಕಾಂಗ್ರೆಸ್ ಶಾಸನಸಭಾ ಸದಸ್ಯ ಮಿ || ಇ ಕ್ಬಾಲ್ ಹುಸೇನರನ್ನು ತಾ || 5 ರಂದು ಪರಭಾಣಿ ಪಟ್ಟಣದ ಬೀದಿಗಳಲ್ಲಿ ಕತ್ತೆ ಮೇಲೆ ಕೂರಿಸಿ, ಕತ್ತೆಗೆ ಜೋಡಿನ ಹಾರ ಹಾಕಿ, ಮರಾಟ್ವಾಡ ಭಾಗಕ್ಕೆ ನ್ಯಾಯ ವಿಶ್ವವಿದ್ಯಾಲಯ ಕೇಳುತ್ತಿರುವ ಆಲ್ಲಿಯ ವ್ಯವಸಾಯ ಕಾಲೇಜು ವಿದ್ಯಾರ್ಥಿಗಳು, ಮೆರವಣಿಗೆ ನಡೆಸಿದ್ದು ನಿಜವೆಂದು ಶಾಸನಸಭೆಯಲ್ಲಿ ಮುಖ್ಯಮಂತ್ರಿ ನಾಯ್ಕ್ ರವರು ತಿಳಿಸಿದರು.

★

ಅನುಮೋದನೆ

ಹೈದರಾಬಾದು ರಾಜ್ಯ ವಿಧಾನ ಪರಿಷತ್ತು ಪಾರ್ಲಿಮೆಂಟ್‌ನಲ್ಲಿ ಮಂಜೂರು ಆದ ರಾಜ್ಯಾಂಗ 26 ನೇ ತಿದ್ದುಪಡಿ ಮಸೂದೆಯನ್ನು ಸರ್ವಾನುಮತದಿಂದ ಅನುಮೋದಿಸಿತು.

★

ತುಟ್ಟಿಭತ್ಯ ಹೆಚ್ಚಳ

ಒಂದು ಸಾವಿರ ರೂಪಾಯಿಗಳಿಗೆ ಕಡಿಮೆ ವೇತನ ಪಡೆಯುತ್ತಿರುವ ಸರ್ಕಾರಿ ಕ್ಲರ್ಕರಿಗೆ ತುಟ್ಟಿಭತ್ಯ ರೂ. ಹತ್ತು ಹೆಚ್ಚಿಗೆ ಮಾಡಿರುವುದನ್ನು ಮುಖ್ಯ ಮಂತ್ರಿ ಶ್ರೀ ಎಂ. ಕರುಣಾನಿಧಿ ಪ್ರಕಟಿಸಿರುವರು. ಪಿರಾಮನೇತನ ಪಡೆಯುವವರಿಗೆ ತುಟ್ಟಿಭತ್ಯ ರೂ ಹೆಚ್ಚಿಸಲಾಗುತ್ತಿಲ್ಲ

★

ಫೇರ್ ಓ ಕಾರ್ಯ

ಅಸ್ಸಾಂ ತೆರಿಗೆ ವಿವರವಾಗಿ ಪರಿಶೀಲಿಸಲು ವ್ಯವಸ್ಥೆ ಆಗಿದ್ದ ಕಾಪ್ರೋರೇಷನ್ ವಿಶೇಷ ಸಭೆಯ ಕಾಲದಲ್ಲಿ ಮೇಯರ್ ಮತ್ತು ಉಪಮೇಯರ್ ಫೇರ್‌ವೆಲ್ ಮಾಡಲ್ಪಟ್ಟರು

★ ಪ್ರಶ್ನೆ ಪತ್ರಿಕೆ ಕಳವು ಸಂಬಂಧದಲ್ಲಿ ಮುಂಬೈನಲ್ಲಿ ಹುಡುಗ ಬಂಧಿತನಾದ.

ಭಾರತದ ಒಪ್ಪಿಗೆ

ರೂ. 4 ಕೋಟಿ ಮೊತ್ತದ ಪದಾರ್ಥದ ಆಮದನ್ನು ಮಾಡಿಕೊಳ್ಳಲು ಭಾರತ ಅಂಗೀಕರಿಸಿರುವದಾಗಿ ನವ ದೆಹಲಿ ವಾರ್ತೆ.

○

ಭಾರತದಿಂದ ನಿರಾಕರಣೆ

ವಿಶ್ವಸಂಸ್ಥೆ ಮಾನವೀಯ ಹಕ್ಕಿನ ಆಯೋಗದ ಮುಂದೆ ಭಾರತವು ಪಾಕೀಸ್ತಾನ ಬಂದಿಗಳ ಬಗೆಗೆ ಜಿನೀವಾ ಒಪ್ಪಂದ ಉಲ್ಲಂಘನೆ ಮಾಡಿ ಅವರನ್ನು ಹಿಂಸಿಸಿ ನ್ಯಾಯಬಾಹಿರವಾಗಿ ಬಂಧಿಸಿದೆ ಎಂದು ಪಾಕೀಸ್ತಾನ ಮಾಡಿದ ಆರೋಪವನ್ನು ಭಾರತದ ಪ್ರತಿನಿಧಿ ಶ್ರೀಮತಿ ಲೀಲಾ ದಾಮೋದರ ಮೆನನರು ನಿರಾಕರಿಸಿದರು.

★

ಗೇಣಿದಾರರ ರಕ್ಷಣೆಗೆ

ಗೇಣಿದಾರರ ರಕ್ಷಣೆಗಾಗಿ ತಿದ್ದುಪಡಿ ಮಸೂದೆಯನ್ನು ಇನ್ನೊಂದೆರಡು ದಿನಗಳಲ್ಲಿ ಸಭೆಯ ಮುಂದೆ ತರುವುದಾಗಿ ಶಾಸನ ಸಭೆಯಲ್ಲಿ ಮುಖ್ಯ ಮಂತ್ರಿ ಶ್ರೀ ಡಿ. ದೇವರಾಜ ಅರಸುರವರು ತಿಳಿಸಿದರು.

★

ತೆರಿಗೆ ಬಾಕಿ

ಈ ವರ್ಷ ಫೆಬ್ರವರಿ 29 ರಲ್ಲಿ ಬೊಂಬಾಯಿ ಕಲ್ಕತ್ತಾ, ಮದ್ರಾಸಿನ ಆರವತ್ತೆರಡು ಚಲಚ್ಚಿತ್ರ ನಟನಟಿಯರು ರೂ. ಹನ್ನೆರಡು ಲಕ್ಷದಿಂದ ರೂ. ಹತ್ತು ಸಾವಿರದ ವರೆಗೆ ಬಾಕಿದಾರರಾಗಿದ್ದರೆಂದು ಲೋಕಸಭೆಯಲ್ಲಿ ತಿಳಿಸಲಾಯಿತು. ಶ್ರೀ ಎಂ. ಜಿ ರಾಮುಚಂದ್ರ ಅತಿ ಹೆಚ್ಚು – ಹನ್ನೆರಡು ಲಕ್ಷ.

●

ಅಮಿತ್ರ ಕಾರ್ಯ

ಅಮೇರಿಕಾ 7 ನೇ ನೌಕಾದಳದ ಕಾರ್ಯಕ್ರಮ ಪಡೆಯು ಬಂಗಾಳಿಕಾ ಕೊಲ್ಲಿಗೆ ಬಂದುದು ಅಮೇರಿಕಾ ಸರ್ಕಾರದ ಅಮಿತ್ರ ಕಾರ್ಯವೆಂದು ಸರ್ಕಾರ ಭಾವಿಸುವದಾಗಿ ರಾಜ್ಯಸಭೆಯಲ್ಲಿ ತಿಳಿಸಲಾಯಿತು

ದಿವ್ಯವಾಣಿ

ಯಾರ ಹೃದಯವು ದಯಾಪೂರ್ಣವಾಗಿದೆಯೋ, ಮಾತು ಸತ್ಯಯುತವಾಗಿದೆಯೋ, ದೇಹವು ಪರಹಿತಕ್ಕಾಗಿ ಸಂಯುಕ್ತವಾಗಿದೆಯೋ, ಅಂತಹವನಿಗೆ ಕಲಿಯ ಕೇಡಿನ ಭಯವಿಲ್ಲ. — ಸುಭಾಷಿತ

★

ಮೈಸೂರು ರಾಜ್ಯದಲ್ಲಿರುವ ವಿದೇಶೀ ಹಸ್ತಕರು

ಭಾರತಾದ್ಯಂತ ಇರುವ ವಿದೇಶೀ ಕ್ರೈಸ್ತ ಮಿಷನರಿಗಳ ಸಂಖ್ಯೆ 6409 ; ಮೈಸೂರು ರಾಜ್ಯದಲ್ಲಿ 468 ನುಂಗಿ ಇದ್ದಾರೆ ; ತಮಿಳುನಾಡುವಿನಲ್ಲಿ 813, ಮಹಾರಾಷ್ಟ್ರದಲ್ಲಿ 787 ಪಶ್ಚಿಮ ಬಂಗಾಳದಲ್ಲಿ 491 ; ಮಿಕ್ಕವರು ಇತರ ರಾಜ್ಯಗಳಲ್ಲಿ ಕಾರ್ಯಾಚರಣೆ ನಡೆಸುತ್ತಿರುವರು. ಧರ್ಮಸಮೃದ್ಧ ಈ ದೇಶದಲ್ಲಿ ಸಾಮ್ರಾಜ್ಯ ಶಾಹಿ ರಾಷ್ಟ್ರಗಳ ಏಜೆಂಟರುಗಳಾಗಿ ಇವರು ಕೆಲಸ ಮಾಡುತ್ತಿದ್ದಾರೆ [ವಿಕ್ರಮ]

Help The Gorakshana

— Humanitari n Propoganda Monthly ....

ವುಡ್‌ಲಾಂಡ್ 7-4-72 ರಿಂದ ಅಮೋಘ 2ನೇ ವಾರ

ಪ್ರಗತಿ ಚಿತ್ರ ಇಂಟರ್‌ನ್ಯಾಷನಲ್‌ರವರ ಹಿಂದಿ ಈಸ್ಟ್‌ಮನ್ ಕಲರ್ ಚಿತ್ರ

ಗಂಗಾ ತೇರಾ ಪಾನಿ ಅಮೃತ್

ಪಾತ್ರ : ಅಶೋಕ ಕುಮಾರ್, ನವೀನ್ ನಿಶ್ಚಲ್, ಜೋಗಿಟಾ ಬಾಲಿ, ಶತ್ರುಘ್ನ ಸಿನ್ಹ, ಪ್ರಾಣ್, ರೆಹಮಾನ್, ನಿರೂಪರಾಯ್ ಮುಂತಾದವರು

ಸಂಗೀತ – ಶಂಕರ್ ಜೈಕಿಷನ್ (ದಿನ 3 ಪ್ರದರ್ಶನಗಳು) ದಿಗ್ದರ್ಶನ – ವಿಜಯ್ ಆನಂದ್

ಬಾಲ್ಕನಿ ತರಗತಿಗಳಿಗೆ ಬೆಳಿಗ್ಗೆ 11 ರಿಂದ 12 ರ ವರೆಗೆ ಮುಂಗಡ ಟಿಕೆಟ್ ಉಂಟು

ಬೆಳಿಗಿನ ಪ್ರದರ್ಶನ ಪ್ರತಿ ದಿನ 10-30 ಕ್ಕೆ "ಕಪ್ಪು ಬಿಳುಪು"

ಅಪೇರಾ 7 4 72 ರಿಂದ

ಅತ್ಯಮೋಘ ತೆಲುಗು ಚಿತ್ರ

ಬಂದಿಪೋಟಿ ದೊಂಗಲು

ಪಾತ್ರ : ನಾಗೇಶ್ವರರಾವ್, ಎಸ್. ವಿ. ರಂಗರಾವ್, ಜಮುನ, ಕಾಂಚನ ಗುಮ್ಮಡಿ

ನಿರ್ದೇಶನ – ಸಿ. ಪ್ರಕಾಶರಾವ್ ದಿನ 3 ಪ್ರದರ್ಶನಗಳು

SHAKTI

SUDHA

A Superb Tonic

ಶಂಕರಪ್ಪ ಸ್ಮಾರಕ ನಿರ್ಮಿಸಿ

ಎ ಲ್ ಲ .

ಮೈಸೂರು ನಗರ ಅಡಳಿತ ಕಾಂಗ್ರೆಸ್ ಸಮಿತಿಯ ಗಮನಕ್ಕೆ

ಮೈಸೂರು ರಾಜ್ಯ ಅಡಳಿತ ಕಾಂಗ್ರೆಸ್ ಗಮನಕ್ಕೆ

ಮೈಸೂರು ಮಂತ್ರಿಮಂಡಲದ ಗಮನಕ್ಕೆ

ಒಳಾಡಳಿತ ಶಾಖೆಯನ್ನು ಹೊಂದಿರುವ ಮುಖ್ಯ ಮಂತ್ರಿಯವರಾದ ಸನ್ಮಾನ್ಯ ಶ್ರೀ ಡಿ. ದೇವರಾಜ ಅರಸ್ ಅವರ ಸ|| ಕ್ಕೆ

1942 ರ ಸ್ವಾತಂತ್ರ್ಯ ಹೋರಾಟದಲ್ಲಿ ಮೈಸೂರು ಕಾರಾಗೃಹದಲ್ಲಿ ಹುತಾತ್ಮರಾದ ಶಂಕರಪ್ಪನಿಗೆ ಸೂಕ್ತ ಸ್ಮಾರಕ ರಚಿಸಿ

ಶಂಕರಪ್ಪ ಮೆಡಿಕಲ್ ವಿದ್ಯಾರ್ಥಿ. ಅವರೊಡನೆ ಕಾರಾಗೃಹದಲ್ಲಿ ಇದ್ದ, ಈಗ ಪ್ರಧಾನರ ಬಳಿ ಸೇವೆ ಸಲ್ಲಿಸುತ್ತಿರುವ ಶ್ರೀ ಹೆಚ್ ವೈ ಶಾರದಾ ಪ್ರಸಾದ್ ಮತ್ತು ಚಿತ್ರೋದ್ಯಮಿ ಶ್ರೀ ಎಂ. ವಿ. ಕೃಷ್ಣಸ್ವಾಮಿ ಶಂಕರಪ್ಪನ ಬಗೆಗ ವಿಚಾರ ತಿಳಿಸಲು ಸಮರ್ಥರು

Protect the Cow

Quality Printi Neat Binding

Lakshminarasimha Press

Sivarampet, Mysore

'ಮಾನವನು ಕೀಳು ಸೃಷ್ಟಿಯ ಧಣಿ, ಶ್ರೇಷ್ಠ ವೆನ್ನುವುದು ಸೊಕ್ಕಿನ' ಕಲ್ಪನೆ.'
ಬದುಕಿಗೆ ಮಹತ್ ಶಕ್ತಿ ಕೊಡಲ್ಪಟ್ಟ ಅವನು ಮೃಗಸಾಮ್ರಾಜ್ಯಪ ಧರ್ಮಕರ್ತ

— ಮಹಾತ್ಮಾ ಗಾಂಧಿ

ಈ ಸಂದೇಶ ಹೊತ್ತ ಚಿತ್ರ ಸಂದೇಶ್ ರವರ ಚೊಚ್ಚಲು ಚಿತ್ರ

ಆನೆ - ಹುಡುಗ

ಹೊಸ ರೀತಿಯ ತಿಳುವಳಿಕೆ ಕೊಡುವ ಆಕರ್ಷಣೀಯ ಚಿತ್ರ

Contribute Liberally

to the National Defence Fund

ಕುಟುಂಬ ಯೋಜನೆ ದೇಶ ಹಿತಕ್ಕಾಗಿ

Edited Printedand Published by Dharmapracharanirata M S Krishna Rao (Proprietor) at the Satyavadi Press Chamarajapuram Mysore 4